ಅನುಬಂಧ-I

ಐಕಳದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 169(28)

ಸದಸ್ಯರ ಹೆಸರು: ಶ್ರೀ ಅಭಯ ಚಂದ್ರ (ಮೂಡಬಿದ್ರೆ)

ಉತ್ತರಿಸುವ ಸಚಿವರು: ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ಪ್ರಶ್ನೆ

ಅ) ಐಕಳದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡದ ನಿರ್ಮಾಣಕ್ಕೆ ಮಂಜೂರಾದ ಹಣ ಎಷ್ಟು? ಅದರ ಕೆಲಸ ಯಾವ ಹಂತದಲ್ಲಿದೆ?

ಆ) ಈ ಶಾಲೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ಅದಕ್ಕಾಗಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಉತ್ತರ

ಅ) ಸದರಿ ವಸತಿ ಶಾಲಾ ಬಾಲಕರ ವಸತಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ರೂ.73.00 ಲಕ್ಷಗಳ ಅಂದಾಜು ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಮೊದಲ ಕಂತಿನಲ್ಲಿ ಸರ್ಕಾರವು ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಎರಡನೇ ಕಂತಿನಲ್ಲಿ ರೂ.15.0 ಲಕ್ಷ ಮತ್ತು ಮೂರನೇ ಕಂತಿನಲ್ಲಿ ರೂ.20.00 ಲಕ್ಷ, ಹೀಗೆ ಈವರೆವಿಗೆ ಒಟ್ಟು ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈವರೆಗೆ ರೂ.60.00 ಲಕ್ಷಗಳನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಿದೆ. ಕಟ್ಟಡ ನಿರ್ಮಾಣ ಕೆಲಸ ಛಾವಣಿ ಹಂತದವರೆಗೆ ನಡೆದಿದೆ.

ಆ) ಸ್ವಂತ ಕಟ್ಟಡ ನಿರ್ಮಾಣದ ಕೆಲಸ ಛಾವಣಿ ನಿರ್ಮಾಣದ ಹಂತದಲ್ಲಿದೆ.

ಇ) ಈಗಾಗಲೇ ಕಟ್ಟಡದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಲಿಂಗಸೂಗೂರು ತಾಲ್ಲಾಕು ಮಸ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 172(364)

ಸದಸ್ಯರ ಹೆಸರು: ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂಗೂರು)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

ಅ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮಸ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ. ಸದರಿ ಯೋಜನೆಗೆ ತಗಲಬಹುದಾದ ಅಂದಾಜು ಮೊತ್ತವೆಷ್ಟು;

ಇ. ಯೋಜನೆ ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗಬಹುದು?

ಈ. ಯೋಜನೆಯು ಕಾರ್ಯರೂಪದಲ್ಲಿಇದ್ದಲ್ಲಿ ಅದು ಯಾವ ಹಂತದಲ್ಲಿದೆ?

ಉತ್ತರ

ಅ. ಮಸ್ಕಿ ಪಟ್ಟಣಕ್ಕೆ ತುಂಗಭದ್ರಾ ಎಡದಂಡೆ ಕಾಲುವೆಯಿಂದ ನೀರು ಪೂರೈಕೆ ಮಾಡುವ ಪ್ರಸ್ತಾವನೆಯು ತಾಂತ್ರಿಕ ಪರಿಶೀಲನೆಯಲ್ಲಿದೆ.

ಆ. ಈ ಯೋಜನೆಗೆ ಮೆ. ಸ್ಟುಪ್ ಕನ್ಸಲ್ಟೆಂಟ್ಸ್ ಬೆಂಗಳೂರು ಇವರು ರೂ.5.897 ಕೋಟಿ ಮೊತ್ತದ ಪ್ರಾಜೆಕ್ಟ್ ವರದಿಯನ್ನು (ವಿನ್ಯಾಸ ವರದಿ) ತಯಾರಿಸಿದ್ದು ಸದರಿ ಕನ್ಸಲ್ಟೆಂಟ್‌ರಿಗೆ ಯೋಜನಾ ವೆಚ್ಚವನ್ನು ಕಡಿಮೆ ಮಾಡಲು ಸೂಚಿಸಲಾಗಿದೆ.

ಇ ಮತ್ತು ಈ. ಯೋಜನೆ ವಿವರವಾದ ಅಂದಾಜು ಪಟ್ಟಿಯನ್ನು ಇನ್ನೂ ತಯಾರಿಸಬೇಕಾಗಿದೆ.

ರಾಜ್ಯದಲ್ಲಿ ಎಸ್.ಸಿ., ಎಸ್.ಟಿ. ಪಂಗಡಗಳ ಆಡಳಿತ ಮಂಡಳಿಗಳು ನಡೆಸುತ್ತಿರುವ ಶಾಲೆಗಳಿಗೆ ಅನುದಾನ ನೀಡುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 173(365)